ಇಂದು ದಿನಾಂಕಃ 02.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ನಮ್ಮ ಸ್ವಂತ ಊರು ಮಲ್ಲೇನಹಳ್ಳಿ ಶಿಕಾರಿಪುರ ತಾಲೂಕು. ನಮ್ಮ ಜಮೀನು ಸದರಿ ಮಲ್ಲೇನ ಹಳ್ಳಿಯಲ್ಲಿಯೇ ಇರುತ್ತದೆ. ವಾದಿಯ ಆಸ್ತಿ ಸರ್ವೆನಂ.264, 265 ಆಗಿರುತ್ತದೆ. ವಾದಿಯ ಜಮಿನಿನ ಅಕ್ಕಪಕ್ಕದಲ್ಲಿ ನಮ್ಮ ಜಮೀನು ಇದಿದ್ದು ಅದರ ಸರ್ವೆನಂ.26 ಆಗಿರುತ್ತದೆ. ಸದರಿ ಸರ್ವೆನಂಬರ ನ ವಿಸ್ತೀರ್ಣ 2.1/2 ಎಕರೆ ಇರುತ್ತದೆ. ಸದರಿ ಜಮೀನು ಶಿಕಾರಿಪುರ ತಾಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ. ಆ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ವಾದಿಯ ಜಮೀನಿನ ಪೂರ್ವ ಭಾಗಕ್ಕೆ 10 ಅಡಿ ದೂರದಲ್ಲಿ ನಮ್ಮ ಜಮೀನು ಇರುತ್ತದೆ. ಪ್ರತಿವಾದಿಯರ ಆಸ್ತಿಯ ದಕ್ಷಿಣ ಭಾಗಕ್ಕೆ ನಮ್ಮ ಆಸ್ತಿ ಇರುತ್ತದೆ. ನಮ್ಮ ಆಸ್ತಿಯ ದಕ್ಷಿಣ ಭಾಗಕ್ಕೆ ಮಲ್ಲೇನಹಳ್ಳಿಯ ಈರಪ್ಪ ಮಲ್ಲಪ್ಪ ರವರ ಜಮೀನು, ಉತ್ತರಕ್ಕೆ ಘಾಶಿಯರ್ ರವರ ಜಮೀನು, ಪೂರ್ವಕ್ಕೆ ನಮ್ಮದೇ ಜಮೀನಿನ ಸರ್ವೆನಂ. 26/3 ಇರುತ್ತದೆ, ಪಶ್ಚಿಮಕ್ಕೆ ವಾದಿಯರ ಜಮೀನು ಇರುತ್ತದೆ. ವಾದಿಯ ಜಮೀನಿನ ಪಶ್ಚಿಮ ದಿಕ್ಕಿಗೆ ಮುಸ್ಲಿಂ ರವರ ಜಮೀನು ಇದಿದ್ದು ಅವರ ಹೆಸರು ನನಗೆ ಹೇಳಲು ಆಗುವುದಿಲ್ಲ.

2. ನನ್ನ ಜಮೀನಿಗೆ ದಕ್ಷಿಣಕ್ಕೆ ಇರುವ ರಸ್ತೆಯಲ್ಲಿ ಮಲ್ಲೇನಹಳ್ಳಿ ಗ್ರಾಮದಿಂದ ಬರುತ್ತೇವೆ. ಆ ರೀತಿ ನಾವು ಬರುವಾಗ 2 ಜಮೀನುಗಳನ್ನು ದಾಟಿ ಬರಬೇಕಾಗುತ್ತದೆ. ಅವರೆಂದರೆ ನಿಂಗಪ್ಪ ಶಿಕ್ಕರಶೆಟ್ಟಿ, ಈರಪ್ಪ ಮಲ್ಲಪ್ಪ ರವರ ಜಮೀನುಗಳಾಗಿರುತ್ತವೆ. ಸದರಿಯವರ ಜಮೀನುಗಳ ದಕ್ಷಿಣ ದಿಕ್ಕಿಗೆ ಇರುವ ರಸ್ತೆಯಲ್ಲಿ ನಾವು ನಮ್ಮ ಜಮೀನಿಗೆ ಓಡಾಡುತ್ತೇವೆ. ಸದರಿ ದಾರಿ ವಹಿವಾಟಿನ ದಾರಿ ಆಗಿರುತ್ತದೆ ಹೊರತು ನಕಾಶೆ ದಾರಿಯಾಗಿರುವುದಿಲ್ಲ. ನಾನು ಮತ್ತು 1ನೇ ಪ್ರತಿವಾದಿ ಸಂಬಂದಿಕರು ಎಂದರೆ ಸರಿಯಲ್ಲ, ಆದರೆ ಒಂದೇ ಜಾತಿಯವರಾಗಿರುತ್ತೇವೆ. ಆ ಕಾರಣದಿಂದ ನಮ್ಮಿಬ್ಬರ ನಡುವೆ ಆಪ್ತತೆ ಇರುತ್ತದೆ ಎಂದರೆ ಸರಿಯಲ್ಲ.

3. ಗುತ್ತಿಕಟ್ಟಿ ಕೆರೆ ಅಂತಾ ಇರುವುದು ಖರಾಬು ಅಲ್ಲ ಎಂದರೆ ಸಾಕ್ಷಿಯು ಅದು ಕೆರೆ ಎಂದು ನುಡಿದಿರುತ್ತಾರೆ. ಆ ರೀತಿ ಕೆರೆ ಇರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ ಆದರೆ ಜನ ಮಾತನಾಡುವುದರಿಂದ ನನಗೆ ಆ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಕೆರೆ ಅಂಗಳ ಇರುತ್ತದೆ ಎಂದರೆ ಸಾಕ್ಷಿಯು ಮಣ್ಣನ್ನು ತೋಡಿರುತ್ತಾರೆ ಎಂದು

ನುಡಿದಿರುತ್ತಾರೆ. ಸದರಿ ಕೆರೆಗೆ ನೀರು ಬರುವಂತಹ ಮೂಲಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಗುತ್ತಿಕಟ್ಟಿ ಕೆರೆಯ ಪೂರ್ವ ದಿಕ್ಕಿನ ಕೆರೆಯ ಒಡ್ಡಿನ ಮೇಲೆ ವಾದಿಯರು ತಮ್ಮ ಜಮೀನಿಗೆ



ಓಡಾಡಲು ದಾರಿಯನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಕೆರೆಯ ಒಡ್ಡು ಬಲವಾದದ್ದು ಆಗಿರುತ್ತದೆ ಎಂದರೆ ಸಾಕ್ಷಿಯು ಸಣ್ಣದಾಗಿರುತ್ತದೆ ಎಂದು ನುಡಿದಿರುತ್ತಾರೆ. ಈವರಗೊ ಸದರಿ ಒಡ್ಡು ಒಡೆದಿಲ್ಲ ಎಂದರೆ ಸರಿ. ಸದರಿ ಒಡ್ಡು 10 ಫೂಟ್ ಎತ್ತರ, 3 ರಿಂದ 4 ಫೂಟ್ ಅಗಲ ಇರುತ್ತದೆ. ಕರೆಯ ಪಶ್ಚಿಮ ಭಾಗಕ್ಕೂ ಒಡ್ಡು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಪಶ್ಚಿಮ ಭಾಗಕ್ಕೆ ಕೆರೆಯ ಅಂಗಳ ಇರುತ್ತದೆ ಎಂದು ನುಡಿದಿರುತ್ತಾರೆ. ನಾನು ನಮ್ಮ ಜಮೀನಿಗೆ ಓಡಾಡುವ ದಾರಿಯ ಮೂಲಕ ವಾದಿಯರು ಅವರ ಜಮೀನಿಗೆ ಓಡಾಡುವುದಿಲ್ಲ ಎಂದರೆ ಸರಿ.

4. ವಾದಿ ಕುಂತಿ ಗುಡ್ಡದ ಪೂರ್ವ ದಿಕ್ಕಿಗೆ ಇರುವ ವಹಿವಾಟಿನ ದಾರಿಯ ಮೂಲಕ ಓಡಾಡುತ್ತಾರೆ. ಚಿಕ್ಕೇರೂರ ಗ್ರಾಮದಿಂದ ಕುಂತಿಗುಡ್ಡ ಗ್ರಾಮಕ್ಕೆ ಹೋಗುವ ರಸ್ತೆ ಮಲ್ಲೇನಹಳ್ಳಿ ಗ್ರಾಮದವರೆಗೂ ಹೋಗುತ್ತದೆ ಎಂದರೆ ಸರಿ. ನಂತರ 3-4 ಜನ ಮಾಲೀಕರ ಆಸ್ತಿಗಳು ವಾದಿಯ ಆಸ್ತಿ ಹಾಗೂ ಮಲ್ಲೇನಹಳ್ಳಿ ಗ್ರಾಮದ ರಸ್ತೆಯವರೆಗೂ ಇರುತ್ತದೆ. ಸದರಿ ಜಮೀನಿನ ಮಾಲೀಕರು ಅನುಮತಿ ನೀಡಿದರೆ ಮಾತ್ರ ವಾದಿ ತನ್ನ ಜಮೀನಿಗೆ ಅವರ ಜಮೀನುಗಳ ಮೇಲೆ ಹೋಗಬಹುದು ಇಲ್ಲದಿದ್ದರೆ ಇಲ್ಲ ಎಂದರೆ ಸರಿ. ಸದರಿ ಮಲ್ಲೇನಹಳ್ಳಿ ರಸ್ತೆಯಿಂದ ವಾದಿಯ ಆಸ್ತಿಗೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸಾಕ್ಷಿಯು ಅಸಂಬದ್ಧವಾಗಿ ಯಾವುದಾವುದೋ ಉತ್ತರ ನೀಡಲು ಪ್ರಯತ್ನಿಸಿರುತ್ತಾರೆ.

5. ನಾನು ಸಲ್ಲಿಸಿರುವ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು 1ನೇ ಪ್ರತಿವಾದಿ ನೀಡಿರುತ್ತಾರೆ. ವಾದಿಯರು ಓಡಾಡುತ್ತಿರುವಂತಹ ಒಡ್ಡು ಸರಕಾರಕ್ಕೆ ಸೇರಿದ್ದು ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾದಿಯನ್ನು ಓಡಾಡಬೇಡ ಎಂದು ಹೇಳಲು ನನಗಾಗಲೀ ಅಥವಾ ಪ್ರತಿವಾದಿಯರಿಗಾಲೀ ಇಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಮಳೆಗಾಲ ಬಂದಾಗ ಗಿಡ-ಗಂಟೆಗಳು ಬೆಳೆಯುವುದು ಸಹಜ ಎಂದರೆ ಸರಿ. ವಾದಿಯರು ಪ್ರತಿವಾದಿಯರು ಹೇಳಿರುವಂತೆ ಕೆರೆ ಒಡ್ಡು ಒಡೆಯುವ ಕೆಲಸ ಮಾಡಿಲ್ಲ ಎಂದರೆ ಸರಿ. ಕೆರೆಗೆ ನೀರು ಬಂದರೆ ಪಶ್ಚಿಮ ದಿಕ್ಕಿಗೆ ಇರುವ ಗದ್ದೆಗಳ ಮೇಲೆ ಹರಿಯುತ್ತದೆ ಎಂದರೆ ಸರಿ. ಗುತ್ತಿಕಟ್ಟೆ ಕರೆಯ ಪಶ್ಚಿಮ ದಿಕ್ಕಿಗೆ ಇರುವ ಗುತ್ತಿಕಟ್ಟಿ ಒಡ್ಡಿನ ಮೂಲಕ ವಾದಿ ತನ್ನ ಜಮೀನಗಳಲ್ಲಿ ಓಡಾಡಬಹುದು ಎಂದು ಪ್ರತಿವಾದಿಯರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಗುತ್ತಿಕಟ್ಟಿ ಕೆರೆಯ ಪಶ್ಚಿಮ ಭಾಗಕ್ಕೆಯಾವುದೇ ಒಡ್ಡು ಇರುವುದಿಲ್ಲ ಎಂದು ನುಡಿದಿರುತ್ತಾರೆ.

6. ಗುತ್ತಿಕಟ್ಟಿ ಕೆರೆಗೆ ಪೂರ್ವದಿಂದ ಪಶ್ಚಿಮದ ಕಡೆಗೆ ಒಂದು ತೂಬನ್ನು ಹಾಕಿರುತ್ತಾರೆ ಎಂದರೆ ಸರಿ. ಸದರಿ ಒಡ್ಡಿನ ಮೇಲೆ ಒಂದು ಟ್ರಾಕ್ಟರ, ಬಂಡಿ ಓಡಾಡಿದರೆ ಸದರಿ ಒಡ್ಡಿಗೆ ತೊಂದರೆ ಆಗುವುದಿಲ್ಲ ಎಂದರೆ ಸಾಕ್ಷಿಯು ಕಾಲಂತರದಲ್ಲಿ ಅದು ಕೆಡುವಲು ಸಾಧ್ಯ ಇರುತ್ತದೆ ಎಂದು

ನುಡಿದಿರುತ್ತಾರೆ. ಸದರಿ ಕೆರೆ ಚಿಕ್ಕೇರೂರ ಗ್ರಾಮ ಪಂಚಾಯತಿಯವರ ಸುಪರ್ಧಿಯಲ್ಲಿ ಇರುತ್ತದೆ ಎಂದರೆ ಸರಿ. ಒಂದು ವೇಳೆ ತೊಂದರೆ ಆದರೆ ಸದರಿ ಗ್ರಾಮ ಪಂಚಾಯತಿಯವರೆ ಕ್ರಮ ವಹಿಸಬೇಕು ಎಂದರೆ ಸರಿ. ವಾದಿಯರಿಗೆ ವಿವಾದಿತ ದಾರಿಯನ್ನು ಹೊರತುಪಡಿಸಿ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ವಾದಿಯು ತನ್ನ ಪೂರ್ವಜರ ಕಾಲದಿಂದಲೂ ತನ್ನ ಜಮೀನಿಗೆ ವಿವಾದಿತ ದಾರಿಯಿಂದಲೇ ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.